■ ವಿಶಾಖ ಎನ್.



# ಮತ್ತೆ ಹಿರಾನಿ ಸಿನಿಮಾದಲ್ಲಿ ಅಮೀರ್?

'ಪಿಕೆ' ಮಾಡಿ ಹತ್ತು ವಸಂತ ಕಳೆದಿವೆ. ಈಗ ಅದೇ ಹಿರಾನಿ ನಿರ್ದೇಶನದಲ್ಲಿ ಆಮೀರ್ ಸಿನಿ ಬದುಕಿಗೆ ತಿರುವು ಸಿಗಬಹುದೇ?

'ಲಾಲ್ ಸಿಂಗ್ ಛಡ್ಡಾ' ಸಿನಿಮಾ ಬೋರಲಾದ ಮೇಲೆ ಅಮೀರ್ ಖಾನ್ ಸಿನಿಮಾ ವಿಷಯದಲ್ಲಿ ಕಳೆದುಹೋದಂತೆ ಆಗಿದೆ. ವಾಸ್ತವದಲ್ಲಿ ಅದು ಸತ್ಯವಲ್ಲ. ಅವರಿನ್ನು ಸಿನಿಮಾ ಮಾಡುತ್ತಾರೋ ಇಲ್ಲವೋ ಎನ್ನುವ ಜಿಜ್ಞಾಸೆ ಕರಗತೊಡಗಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಮುಂದಿನ ವರ್ಷ ರಾಜ್‌ಕುಮಾರ್ ಹಿರಾನಿ ನಿರ್ದೇಶನದಲ್ಲಿ ಅಮೀರ್ ಖಾನ್ ಸಿನಿಮಾವೊಂದರಲ್ಲಿ ಅಭಿನಯಿಸಲಿದ್ದಾರೆ. ಅದರ ಕುರಿತ ಪೂರ್ವ ಚರ್ಚೆಗಳು ಶುರುವಾಗಿವೆ. ಜೀವನಾಧಾರಿತ ಕಥೆಯೊಂದನ್ನೇ ಚಿತ್ರಕಥೆಯಾಗಿಸಿ ರಾಜ್‌ಕುಮಾರ್ ಹಿರಾನಿ ಸಿನಿಮಾ ಮಾಡಲಿದ್ದಾರೆ. ಅದು ಯಾರ ಕಥೆ ಎನ್ನುವುದು ಇನ್ನೂ ಗುಟ್ಟು.

ಶಾರುಖ್ ಖಾನ್, ವಿಕ್ಕಿ ಕೌಶಲ್ ಹಾಗೂ ತಾಪ್ಸಿ ಪನ್ನು ಅಭಿನಯದ 'ಡಂಕಿ' ಹಿಂದಿ ಚಿತ್ರದ ಕೆಲಸಗಳಲ್ಲಿ ರಾಜ್‌ಕುಮಾರ್ ಹಿರಾನಿ ಸದ್ಯ ತೊಡಗಿಕೊಂಡಿದ್ದಾರೆ. ಇದೇ ಡಿಸೆಂಬರ್‌ನಲ್ಲಿ ಈ ಸಿನಿಮಾ ಬಿಡುಗಡೆಯಾಗುವ ಸಾಧ್ಯತೆ ಇದೆ. ಇದರ ಚಿತ್ರೀಕರಣ ಬಹುತೇಕ ಪೂರ್ಣಗೊಂಡಿದ್ದು, ರಾಜ್‌ಕುಮಾರ್ ಹಿರಾನಿ ಮುಂದಿನ ಸಿನಿಮಾ ಚಟುವಟಿಕೆಯನ್ನು ಈಗಾಗಲೇ ಪ್ರಾರಂಭಿಸಿರುವುದು ಆಸಕ್ತಿಕರ. ಅಮೀರ್ ಖಾನ್ ಹಾಗೂ ಅವರ ಪಾರುಪತ್ಯದಲ್ಲಿ '3 ಈಡಿಯಟ್ಸ್', 'ಪೀಕೆ' ಸಿನಿಮಾಗಳು ದೊಡ್ಡ ಯಶಸ್ಸನ್ನು ಕಂಡಿದ್ದವು. 'ಪಿಕೆ' ತೆರೆಕಂಡಿದ್ದು 2014ರಲ್ಲಿ. ಹತ್ತು ವರ್ಷಗಳ ನಂತರ ಮತ್ತೆ ರಾಜ್‌ಕುಮಾರ್ ಹಿರಾನಿ ಅವರೇ ಅಮೀರ್ ಖಾನ್ ವೃತ್ತಿ ಬದುಕಿಗೆ ಒಂದು ತಿರುವು ನೀಡಲು ಸಿದ್ಧರಾದಂತಿದೆ.

ಹೊಸ ಸ್ಟಾರ್‌ಗಳಿಲ್ಲದೆ ಸೊರಗುತ್ತಿರುವ ಬಾಲಿವುಡ್‌ನಲ್ಲಿ ಈ ವರ್ಷ 'ಪಠಾಣ್' ಚಿತ್ರದಿಂದ ಶಾರುಖ್ ಖಾನ್ ಪುನರ್ ಪ್ರತಿಷ್ಠಾಪಿತರಾದರು. ಆ ಸಿನಿಮಾ ₹550 ಕೋಟಿಯಷ್ಟು ವಹಿವಾಟನ್ನು ದೇಶಿ ಮಾರುಕಟ್ಟೆಯಲ್ಲಿ ಹಿಂದಿ ಅವತರಣಿಕೆಯೊಂದರಲ್ಲೇ ಮಾಡಿತು. ಅದರ ಫಲವೆಂಬಂತೆ 'ಜವಾನ್' ಹಾಗೂ 'ಡಂಕಿ' ಸಿನಿಮಾಗಳ ಸ್ಯಾಟಲೈಟ್, ಸಂಗೀತ ಹಕ್ಕುಗಳು ಒಟ್ಟು ₹480 ಕೋಟಿಗೆ ಮಾರಾಟವಾಗಿವೆ ಎನ್ನುವ ಇನ್ನೊಂದು ಸುದ್ದಿ ಇದೆ. 'ಪಠಾಣ್' ಚಿತ್ರಕ್ಕೆ ಈ ವಿಷಯದಲ್ಲಿ ₹100 ಕೋಟಿ ಸಿಕ್ಕಿತ್ತು. ಶಾರುಖ್ ಮಾರುಕಟ್ಟೆ ಕುದುರಿರುವುದರಿಂದ ರಾಜ್‌ಕುಮಾರ್ ಹಿರಾನಿ ಅವರಿಗೂ ಅನುಕೂಲವಾಗಿದೆ.ಇದರಿಂದ ಅವರು ತಕ್ಷಣಕ್ಕೆ ಇನ್ನೊಂದು ಸಿನಿಮಾ ಕೈಗೆತ್ತಿಕೊಳ್ಳುವ ನಿರ್ಧಾರ ಮಾಡಿದ್ದಾರೆ ಎಂದು ವಿಶ್ಲೇಷಿಸಲಾಗುತ್ತಿದೆ. ಅಮೀರ್ ಖಾನ್ ತಮ್ಮ ಹೊಸ ಸಿನಿಮಾ ಯಾವುದು ಎಂದು ಇದುವರೆಗೆ ಹೇಳಿಲ್ಲ. ■

# ದೊಡ್ಡ ಬ್ರೇಕ್‌ಗೆ ಸಮಂತಾ ನಿರ್ಧಾರ

ಸಮಂತಾ 'ಖುಷಿ' ತೆಲುಗು ಸಿನಿಮಾದಲ್ಲಿ ವಿಜಯ್ ದೇವರಕೊಂಡ ಜೊತೆ ನಟಿಸುತ್ತಿದ್ದಾರೆ. 'ಸಿಟಾಡೆಲ್' ಎನ್ನುವ ವೆಬ್ ಸರಣಿಗೂ ಡೇಟ್ಸ್ ಕೊಟ್ಟಿದ್ದಾರೆ. 'ಖುಷಿ' ಚಿತ್ರೀಕರಣ ಮುಗಿಯುತ್ತಾ ಬಂದಿದ್ದೇ ಅವರು ಮುಂದೆ ಯಾವ ಚಿತ್ರಗಳನ್ನೂ ಒಪ್ಪಿಕೊಳ್ಳುತ್ತಿಲ್ಲ ಎನ್ನುವ ಸುದ್ದಿಗೆ ರೆಕ್ಕೆಪುಕ್ಕ ಮೂಡಿದೆ.

ಸಮಂತಾ ಅವರಿಗೆ 'ಮಯೋಸಿಟಿಸ್' ಎನ್ನುವ ಆರೋಗ್ಯ ಸಮಸ್ಯೆ ಇದೆ. ರೋಗ ನಿರೋಧಕ ಶಕ್ತಿಯನ್ನು ಕುಗ್ಗಿಸುವ ಗಂಭೀರ ತೊಂದರೆ ಇದು. ಇದಕ್ಕೆ ಚಿಕಿತ್ಸೆ ಪಡೆದುಕೊಳ್ಳುತ್ತಿರುವುದಾಗಿ ಅವರು ಈಗಾಗಲೇ ತಿಳಿಸಿದ್ದಾರೆ. ಇನ್ನೂ ಹೆಚ್ಚುವರಿ ಚಿಕಿತ್ಸೆ ಪಡೆದು, ಚೇತನ ಪಡೆದುಕೊಳ್ಳಲೆಂದೇ ಅವರು ಕೆಲಸದಿಂದ ಸುದೀರ್ಘ ಬ್ರೇಕ್ ಪಡೆದುಕೊಳ್ಳಲು ನಿರ್ಧರಿಸಿದ್ದಾರೆ. ಈಗಾಗಲೇ ಕೆಲವು ನಿರ್ಮಾಪಕರು ಅವರಿಗೆ ಮುಂಗಡ ಹಣ ನೀಡಿದ್ದರು. ಅವನ್ನೆಲ್ಲ ಹಿಂದಿರುಗಿಸುತ್ತಿರುವ ಸಮಂತಾ, ಆರೋಗ್ಯವೇ ಮುಖ್ಯ ಎಂದಷ್ಟೆ ಹೇಳುತ್ತಿದ್ದಾರೆ.

'ನಿನ್ನು ಕೋರಿ', 'ಟ್ರಕ್ ಜಗದೀಶ್' ತರಹದ ಸಿನಿಮಾಗಳನ್ನು ನಿರ್ದೇಶಿಸಿರುವ ಶಿವ ನಿರ್ವಾಣ 'ಖುಷಿ' ರೊಮ್ಯಾಂಟಿಕ್ ಕಾಮಿಡಿಗೆ ಆ್ಯಕ್ಷನ್–ಕಟ್ ಹೇಳಿದ್ದಾರೆ. 'ಹೃದಯಂ' ಮಲಯಾಳಂ ಸಿನಿಮಾದ ಹಿಟ್ ಹಾಡುಗಳಿಗೆ ಸ್ವರ ಸಂಯೋಜನೆ ಮಾಡಿದ ಹೇಶಂ ಅಬ್ದುಲ್ ವಹಾಬ್ ಅವರಿಂದ ಶಿವ ಟ್ಯೂನ್‌ಗಳನ್ನು ಮಾಡಿಸಿದ್ದಾರೆ.

'ಸಿಟಾಡೆಲ್' ವೆಬ್ ಸರಣಿಯಲ್ಲಿ ಪ್ರಿಯಾಂಕಾ ಚೋಪ್ರಾ ಅಮ್ಮನ ಪಾತ್ರದಲ್ಲಿ ಸಮಂತಾ ಕಾಣಿಸಿಕೊಂಡಿರುವುದು ಇನ್ನೊಂದು ವಿಶೇಷ. ಪ್ರಿಯಾಂಕಾ ಅವರಿಗಿಂತ ವಯಸ್ಸಿನಲ್ಲಿ ನಾಲ್ಕು ವರ್ಷ ಚಿಕ್ಕವರಾದರೂ ಅಂತಹ ಪಾತ್ರ ನಿರ್ವಹಿಸುತ್ತಿರುವುದು ಅಭಿನಯದ ಉತ್ಕಟತೆಗೆ ಸಾಕ್ಷಿ. ■

